೪)	ರಾಮಘಾಳ್ ಏತ	೪.೫೦ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)
೫)	ಭದ್ರಾ ಮೇಲ್ದಂಡೆ	೮.೦೦ ಟಿಎಂಸಿ (ಅನ್ವೇಷಣಾ ಹಂತದಲ್ಲಿದೆ)
೬)	ಮಂದಗೆರೆ ಮಾಸೂರ್	೨.೭೧ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)
೭)	ಗಂಡೋರಿ ನಾಲಾ	೨.೧೬ ಟಿಎಂಸಿ (ಕೇಂದ್ರ ಜಲ ಆಯೋಗದ ಸಮ್ಮತಿ ದೊರಕಿದೆ)
೮)	ಹೊಸದಾಗಿ ತೆಗೆದುಕೊಳ್ಳಬೇಕಾದ ಯೋಜನೆಗಳು	೧.೦೫ ಟಿಎಂಸಿ (ಅನ್ವೇಷಣಾ ಹಂತದಲ್ಲಿದೆ)

ಶ್ರೀ ಜಿ. ರಾಜಗೌಡ.—ಬಚಾವತ್ ಕಮಿಟಿಯು ತೀರ್ಪಾನದಂತೆ ೮೦೦ ಟಿಎಂಸಿ ನೀರನ್ನು ಆಂಧ್ರಪ್ರದೇಶ ಉಪಯೋಗಿಸಿಕೊಂಡಿದೆ. ಅದು ಅದ ಮೇಲೆ ತೆಲುಗುಗಂಗಾ ಯೋಜನೆಯನ್ನು ಕೈಗೆತ್ತಿಕೊಂಡು ೫.೭೫ ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸುವುದಕ್ಕೆ ಈಗಾಗಲೇ ೧೫೫ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿದೆ. ಈ ವರ್ಷ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಗುರಿಯನ್ನು ಇಟ್ಟುಕೊಂಡಿದೆ, ಈ ಬಗ್ಗೆ ನಮ್ಮ ಸರ್ಕಾರದ ಪ್ರತಿಕ್ರಿಯೆ ಏನು ?

ಶ್ರೀ ಹೆಚ್. ಡಿ. ದೇವೇಗೌಡ.—೭೦೦ ಟಿಎಂಸಿ ನೀರನ್ನು ೨೦೦೦ ಇಸವಿ ಮೇ ತಿಂಗಳಿನ ಒಳಗೆ ಉಪಯೋಗಿಸಿ ಕೊಳ್ಳಲಿಕ್ಕೆ ನಮ್ಮ ರಾಜ್ಯಕ್ಕೆ ಅಧಿಕಾರ ಕೊಟ್ಟಿದ್ದಾರೆ.

ಶ್ರೀ ಜಿ. ರಾಜಗೌಡ.—೨೦೦೦ ಇಸವಿಯ ತನಕ ತಮಗೆ ಅವಕಾಶವಿದೆ. ಆದರೆ ಆಂಧ್ರಪ್ರದೇಶದವರು ಹೆಚ್ಚುವರಿ ನೀರನ್ನು ಉಪಯೋಗಿಸಿಕೊಳ್ಳುತ್ತೇವೆಂದು ಪಾದ ಮಾಡುತ್ತಿದ್ದಾರೆ ಅದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಅವರ ವಾದಕ್ಕೆ ಹುರುಳಿಲ್ಲ.

ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು

೧೨೭ (೨೪೩) ಶ್ರೀಮತಿ ಮುಮ್ತಾಜ್‌ಬೇಗಂ (ನರಸಿಂಹರಾಜ)...ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಅಲ್ಪಸಂಖ್ಯಾತರಿಗೆ ಆಡಳಿತ ಮಂಡಳಿಯವರು ಪ್ರಾರಂಭಿಸುವ ಶಾಲೆಗಳಿಗೆ ಸರ್ಕಾರ ಅನುಮತಿ ನೀಡದೇ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದು ಸರ್ಕಾರದ ನೀತಿಗೆ ವಿರುದ್ಧವಲ್ಲವೇ ?

ಇ) ಸರ್ಕಾರವು ಮೇಲಿನ ಸಂಸ್ಥೆಗಳಿಗೆ ಶಾಲೆ ಪ್ರಾರಂಭಿಸಲು ಅನುಮತಿ ನೀಡಲು ಜರೂರಾಗಿ ಕ್ರಮ ಕೈಗೊಳ್ಳುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).

ಅ) ಕೆಲವು ಶಾಲೆಗಳಿಗೆ ಕೊಟ್ಟಿಲ್ಲ,

ಆ) ಇಲ್ಲ.

ಇ) ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಶಾಲೆಯನ್ನು ಪ್ರಾರಂಭಿಸಲು ಕೋರಿರುವ ಸ್ಥಳದಲ್ಲಿ ಶಾಲೆಯ ಅವಶ್ಯಕತೆಯಿದ್ದಲ್ಲಿ ಪರಿಶೀಲಿಸಿ ನಿಯಮಾವಳಿಗಳ ಪ್ರಕಾರ ಅನುಮತಿಯನ್ನು ನೀಡಲಾಗುವುದು.

ಶ್ರೀಮತಿ ಮುಕ್ತರುನ್ನಿಸಾ ಬೇಗಂ.—ಮಾನ್ಯ ಅಧ್ಯಕ್ಷರೇ, ಅನೇಕ ಜನ ಅಲ್ಪಸಂಖ್ಯಾತ ಕೋಮಿನವರು ನಮಗೆ ಶಾಲೆಗಳನ್ನು ಕೊಡಿಬೇಂದು ಅರ್ಜಿ ಹಾಕಿಕೊಂಡಿದ್ದಾರೆ. ನರ್ಸರಿ ಶಾಲೆ, ಪ್ರೈಮರಿ ಶಾಲೆ, ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಆ ಅರ್ಜಿಗಳನ್ನು ಸರ್ಕಾರ ರಿಜೆಕ್ಟ್ ಮಾಡಿದೆ. ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಬೇಕು. ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವ ಗ್ಯಾರಂಟಿ ಇದೆಯೇ ?

ಇದು ನಿಮ್ಮ ನೀತಿಗೆ ವಿರೋಧ ಆಲ್ಲವೇ ಎಂದು ಕೇಳಿದರೆ, ಅವರು ಆಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನೀವು ಸಿಂಧಿ ಜನಾಂಗದವರು ಶಾಲೆ ಪ್ರಾರಂಭ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಶಾಲೆ ಕೊಡಬೇಕು. ಆದೇ ರೀತಿ ಜೈನರು ಶಾಲೆ ಕೇಳಿದರೆ ಕೊಡಬೇಕು. ಉರ್ದು ಶಾಲೆ ಪ್ರಾರಂಭ ಮಾಡುತ್ತೇವೆಂದು ಅನುಮತಿ ಕೇಳಿದರೆ ಅಂಥವರಿಗೆ ಅನುಮತಿ ಕೊಡಬೇಕು. ಸಂವಿಧಾನದ ಹಕ್ಕಿನ ಪ್ರಕಾರ ಅವರಿಗೆ ರಕ್ಷಣೆ ಕೊಡಬೇಕು. ಅಲ್ಪಸಂಖ್ಯಾತರು ಶಾಲೆಗಳನ್ನು ಪ್ರಾರಂಭ ಮಾಡಲಿಕ್ಕೆ ಕರ್ನಾಟಕ ಸರ್ಕಾರದವರು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶಾಲೆಗಳನ್ನು ತೆರೆಯಲು ಪೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಸರ್ಕಾರ ಅಲ್ಪಸಂಖ್ಯಾತರಿಗೋಸ್ಕರ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದೆ. ಬಂದು ಪ್ರಶ್ನೆ ಏನು ಆಗಿದೆ ಎಂದರೆ, ಕೆಲವು ಕಡೆ ಅರ್ಜಿ ಹಾಕಿದ್ದಾರೆ. ಕೆಲವು ಕಡೆ ಅರ್ಜಿಗಳು ರಿಜೆಕ್ಟ್ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಇದಕ್ಕೆ ಕಾರಣ ಏನೆಂದರೆ ಅಲ್ಲಿ ಒಂದು ಶಾಲೆ ಇರುತ್ತದೆ ಸರ್ಕಾರಿ ಶಾಲೆ ಇರಬಹುದು ಅಥವಾ ಖಾಸಗಿ ಶಾಲೆ ಇರಬಹುದು. ಅಲ್ಲೇ ಇನ್ನೊಂದು ಶಾಲೆ ಬೇಕೆಂದು ಅರ್ಜಿಯನ್ನು ಹಾಕಿದಾಗ ನಮಗೆ ತೊಂದರೆಯಾಗುತ್ತದೆ, ಕಷ್ಟವಾಗುತ್ತದೆ. ಎರಡನೆಯದಾಗಿ ಆದಕ್ಕೆ ಎಲ್ಲಾ ರೀತಿಯ ಇನ್‌ಫಾಸ್ಟ್ರಕ್ಚರ್ಸ್ ಇರಬೇಕು. ಮುಖ್ಯವಾಗಿ ಕಟ್ಟಡ ಇರಬೇಕು ಎಂದಿದೆ. ಸಂವಿಧಾನದ ೩೧ನೇ ಆರ್ಟಿಕಲ್ ಪ್ರಕಾರ ಅಲ್ಪಸಂಖ್ಯಾತರ ಹಿತರಕ್ಷಣೆ ಆಗಬೇಕು. ನಿಜ. ಆದರೆ ಎಲ್ಲಿ ಆವಶ್ಯಕತೆ ಇದೆಯೋ ಅಲ್ಲಿ ಈಗಾಗಲೇ ಕೊಟ್ಟಿದ್ದೇವೆ. ಬೇರೆ ಕಡೆಗಳಲ್ಲಿ, ಅಲ್ಲಿ ಈಗಾಗಲೇ ಶಾಲೆ ಇದ್ದಾಗ, ಅಂಥವರ ಅರ್ಜಿ ತಿರಸ್ಕೃತವಾಗಿದ್ದಿರಬಹುದು. ಆದರೆ ಯಾವುದೇ ರೀತಿಯ ತೊಂದರೆಯನ್ನು ಮಾಡಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆಯ ಮತ್ತು ಎರಡನೆಯ ಹಂತ

೧೨೮ (೭೨) ಶ್ರೀ ಆರ್. ಪೆಂಟರಾಮಯ್ಯ (ಮಾಳವಾಗಿಲು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರ ಈಗಾಗಲೇ ಕೈಗೊಂಡಿರುವ ಯೋಜನೆಗಳ ಪೈಕಿ ಕೃಷ್ಣಾ ನದಿಯ ೧ನೇ ಹಂತ ಮತ್ತು ೨ನೇ ಹಂತದಲ್ಲಿ ಎಷ್ಟು ನೀರನ್ನು ಹೊಸದಾಗಿ ಉಪಯೋಗಿಸಲಾಗಿದೆ. ಇನ್ನು ಉಪಯೋಗಿಸಬೇಕಾದ ನೀರಿನ ಪ್ರಮಾಣ ಎಷ್ಟು?

ಆ) ಕೃಷ್ಣಾ ಬಲದಂಡೆ ಯೋಜನೆಯನ್ನು ಸರ್ಕಾರದವರು ಯಾವಾಗ ಕಾರ್ಯಗತಗೊಳಿಸಿದರು?

ಇ) ಈಗ ಈ ಯೋಜನೆಯು ಯಾವ ಹಂತದಲ್ಲಿದೆ?

ಈ) ವಿಶ್ವಬ್ಯಾಂಕ್ ಇದಕ್ಕೆ ಸಾಲ ನೀಡಲು ನಿರಾಕರಿಸುತ್ತಿದೆಯೆ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟದಲ್ಲಿ ೧೧೫ ಟಿ.ಎಂ.ಸಿ. ಮತ್ತು ಎರಡನೇ ಘಟ್ಟದಲ್ಲಿ ೫೪ ಟಿ.ಎಂ.ಸಿ. ನೀರನ್ನು ಉಪಯೋಗಿಸಬೇಕಾಗಿದೆ. ಮೊದಲ ಘಟ್ಟವನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತದೆ. ಮೊದಲ ಹಂತದಲ್ಲಿ ೨೯ ಟಿ.ಎಂ.ಸಿ. ಎರಡನೇ ಹಂತದಲ್ಲಿ ೪೧ ಟಿ.ಎಂ.ಸಿ. ಮತ್ತು ಉಳಿದ ಪ್ರಮಾಣವನ್ನು ಮೂರನೆಯ ಹಂತದಲ್ಲಿ ಉಪಯೋಗಿಸಲಾಗುವುದು.

ಆ) ಕೃಷ್ಣಾ ಬಲದಂಡೆ ಯೋಜನೆ ಎಂಬ ಯಾವ ಯೋಜನೆಯೂ ಇಲ್ಲ. ಆದರೆ ಬಸವ ಸಾಗರದಿಂದ (ನಾರಾಯಣಪುರ ಜಲಾಶಯ) ಎರಡನೆಯ ಘಟ್ಟದಲ್ಲಿ ಬಲದಂಡೆ ಕಾಲುವೆ ನಿರ್ಮಾಣ ಮಾಡಲು ಯೋಜಿಸಲಾಗಿದೆ. ಇದರ ಸರ್ವೆ ಕಾರ್ಯ ನಡೆದಿದೆ.

ಇ) ಮೊದಲ ಘಟ್ಟವು ಮಂಜೂರಾಗಿದ್ದು ಪ್ರಗತಿಯಲ್ಲಿದೆ. ನಾರಾಯಣಪುರ ಆಣೆಕಟ್ಟು ಪೂರ್ಣಗೊಂಡಿದ್ದು ಆಲಮಟ್ಟಿ ಆಣೆಕಟ್ಟು ಪ್ರಗತಿಯಲ್ಲಿದೆ. ನಾರಾಯಣಪುರ ಎಡದಂಡೆ ಕಾಲ್ವೆ ಮತ್ತು ಶಹಾಪುರ ಉಪಕಾಲುವೆ ಪೂರ್ಣಗೊಳ್ಳುವ ಹಂತದಲ್ಲಿವೆ. ಡಿಸೆಂಬರ್ ೧೯೮೬ ಕೊನೆಯ ವರೆಗೆ ೪೦೧.೪೨ ಕೋಟಿ ರೂ.ಗಳು ವಿಚ್ಚಾಗಿದ್ದು ೯೫,೧೫೮ ಹೆಕ್ಟೇರುಗಳಿಗೆ ನೀರಾವರಿ ಅವಕಾಶ ಒದಗಿಸಲಾಗಿದೆ.